(ದಿನಾಂಕಃ 28.06.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವೈ.ಪಿ.ಎಂ ರವರಿಂದ ಃ-**

1. ನಾನು, ಚಾಸ 1 ಮತ್ತು ಆರೋಪಿಯು ಮೂರು ಜನ ಖಾಸ ಸಹೋದರರು ಎಂದರೆ ಸರಿ. 1992 ರಲ್ಲಿ ಅಡಗೋಡಿ ಗ್ರಾಮದ ಸರ್ವೆ ನಂ 8 ರಲ್ಲಿ ವಿಭಾಗ ಆಗಿರುತ್ತದೆ ಎಂದರೆ ಸರಿ. 1992 ರಿಂದ ಆರೋಪಿಯ ಜಮೀನನ್ನು ಚಾಸ 1 ರವರು ಒತ್ತುವರಿ ಮಾಡಿಕೊಂಡು ಉಳುಮೆ ಮಾಡುತ್ತಾ ಬರುತ್ತಿರುತ್ತಾರೆ ಎಂದರೆ ಸರಿಯಲ್ಲ.

2. ನಾನು ಆರೋಪಿಯೊಂದಿಗೆ ಚೆನ್ನಾಗಿ ಇರುವುದಿಲ್ಲ ಎಂದರೆ ಸಾಕ್ಷಿಯು ಈ ಪ್ರಕರಣ ದಾಖಲಿಸದ ನಂತರ ನನ್ನ ಮತ್ತು ಆರೋಪಿಯ ಮಧ್ಯ ಮಾತುಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಹೊರತುಪಡಿಸಿ ನಾವು ಎಲ್ಲಾ ಸಹೋದರರು ಚೆನ್ನಾಗಿ ಇದ್ದೇವೆ ಎಂದರೆ ಸರಿ.

3. ಸುಮಾರು 7 ವರ್ಷಗಳಿಂದ ಆರೋಪಿಯು ಅನೇಕ ದೈಹಿಕ ರೋಗದಿಂದ ಬಳಲುತ್ತಿದ್ದಾರೆ ಎಂದರೆ ಸಾಕ್ಷಿಯು 2 ವರ್ಷಗಳಿಂದ ಬಳಲುತ್ತಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿಯು ಅಸ್ತಮದಿಂದ ಈಗಲೂ ಆನಾರೋಗ್ಯದಿಂದ ಮನೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಚೆನ್ನಾಗಿ ಇದ್ದಾರೆ ಎಂದು ನುಡಿಯುತ್ತಾರೆ.

4. ಆರೋಪಿ ಮತ್ತು ಚಾಸ 1 ರವರ ಮಧ್ಯ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ. ಪ್ರತಿ ವರ್ಷ ಅಡಿಕೆ ಫಸಲು ಕೊಯುವ ಸಮಯದಲ್ಲಿ ಗಲಾಟೆ ಮಾಡುತ್ತಾರೆ ಎಂದರೆ ಸರಿ. ಸುಮಾರು 5 ಗುಂಟೆ ಅಷ್ಟು ಅಡಿಕೆ ಆರೋಪಿಗೆ ಸಂಬಂಧಪಟ್ಟಿದ್ದನ್ನು ಚಾಸ 1 ರವರು ಪಡೆಯುತ್ತಾರೆ ಎಂದರೆ ಸರಿಯಲ್ಲ.

5. ನನಗೆ ಗಲಾಟೆ ಆದ ದಿನಾಂಕವನ್ನು ನಿಖರವಾಗಿ ಹೇಳಲು ಬರುವುದಿಲ್ಲ. ಅದು ಅಧವಾ 2016 ಡಿಸೆಂಬರ್ ಅಥವಾ 2017 ಡಿಸೆಂಬರ್ ಆಗಿರಬಹುದು ಎಂದು ನುಡಿಯುತ್ತಾರೆ.

6. ಘಟನೆ ನಡೆಯಿತು ಎಂಬ ದಿನದಂದು ಆರೋಪಿಯ ಚಾಸ 1 ರವರನ್ನು ಹೊಡೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕೆಲಸಗಾರರನ್ನು ಕೆಳಗೆ

This is a True Copy of the Court Records Online. Authenticated @ districts.ecourtsindia.com/cnr/KASM200011492019/truecopy/order-3.pdf

ದೂಡಿರುತ್ತಾರೆ ಎಂದು ನುಡಿಯುತ್ತಾರೆ. ಆಗ ನಾವು 3–4 ಜನ ಇದ್ದೆವು. ಆರೋಪಿಯು ಒಬ್ಬನೇ ಇದ್ದನು.

7. ಆರೋಪಿಯು ಚಾಸ 1 ರವರಿಗೆ ಗುದ್ದಲಿಯಿಂದ ಹೊಡೆದಿದ್ದನ್ನು ನಾನು ನೋಡಿರುವುದಿಲ್ಲ. 3–4 ಜನ ಇದ್ದವರ ಹೆಸರು ನನಗೆ ಹೇಳಲು ಬರುವುದಿಲ್ಲ. ಈ ಪ್ರಕರಣದಲ್ಲಿರುವ ಫ್ರಾಸ 3 ರವರು ನನ್ನ ಮನೆ ಪಿರ್ಯಾದುದಾರರ ಮನೆ ಮತ್ತು ಇತರೆ 7–8 ಮನೆಯ ಕೆಲಸ ಮಾಡುತ್ತಾರೆ ಎಂದರೆ ಸರಿ.

8. ಆರೋಪಿಯು ನಮ್ಮನ್ನು ಹೊಡೆಯುವಷ್ಟು ಸಾಮಾರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿ ಆರೋಪಿಗೆ ಹಲ್ಲೆ ಮಾಡಿರುವುದಿಲ್ಲ. ಈ ಘಟನೆಯಲ್ಲಿ ಆರೋಪಿಯು ಕೈಯಲ್ಲಿ ಕತ್ತಿ ಮತ್ತು ದೊಣ್ಣೆಯನ್ನು ಹಿಡಿದು ಬಂದಿದನ್ನು ನೋಡಿರುವುದಿಲ್ಲ. ಕಲ್ಲು ಕಂಬಗಳನ್ನು ಪಿಕಾಸಿಯಿಂದ ತುಂಡು ಮಾಡಿರುತ್ತಾರೆ. ಅದನ್ನು ನಾನು ಪ್ರತ್ಯಕ್ಷವಾಗಿ ನೋಡಿರುತ್ತೇನೆ. ಆ ದಿನ ಸುಮಾರು 10 ರಿಂದ 15 ಕಂಬಗಳು ಆರೋಪಿಯು ಕಟ್ಟು ಮಾಡಿರುತ್ತಾರೆ.

9. ಸದರಿ ವಿಚಾರವಾಗಿ ಚಾಸ 1 ರವರು ನಗರ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ. ಪೊಲಿಸರು ಘಟನಾ ಸ್ಥಳಕ್ಕೆ ಬಂದು ವಿಚಾರಣೆ ಮಾಡಿರುತ್ತಾರೆ. ಸಿವಿಲ್ ಕೇಸ್ ಅದ್ದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿರುತ್ತಾರೆ.

10. ಕೆಲಸಗಾರರಿಗೆ ಗಾಯ ಆಗಿದ್ದು ಅವರಿಗೆ ಚಿಕಿತ್ಸೆ ಕೊಡಿಸಿರುವುದಿಲ್ಲ. ನಾನು ಮತ್ತು ಚಾಸ 1 ರವರು ಚೆನ್ನಾಗಿ ಇರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾವು ಅಡಿಕೆ ಬೆಳೆಗೆ ಗೊಬ್ಬರ ಹಾಕುತ್ತಿದ್ದೆವು. ಚಾಸ 1 ರವರು ಸಲ್ಲಿಸಿದ ಖಾಸಗಿ ದೂರಿನ ಅಂಶಗಳನ್ನು ಓದಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.

This is a True Copy of the Court Records Online. Authenticated @ districts.ecourtsindia.com/cnr/KASM200011492019/truecopy/order-3.pdf

This is a True Copy of the Court Records Online. Authenticated @ districts.ecourtsindia.com/cnr/KASM200011492019/truecopy/order-3.pdf

www.ecourtsindia.com